# ಗುರಿಯನ್ನು ಸೇರುವವರೆಗೂ ನಿಲ್ಲದಿರು

ಸ್ವಾಮಿ ಶಿವದೇವಾನಂದ

**ನಮ್ಮ ಅಂತಿಮ ಗುರಿಯನ್ನು ಮರೆತು ದಾರಿಯಲ್ಲಿ ನಿಂತ ನೀರಾಗಿ ಉಳಿಯಬಾರದೆಂದು ಹೇಳುತ್ತಾರೆ ಸ್ವಾಮಿ ಶಿವದೇವಾನಂದಜಿಯವರು. ಉತ್ತಮ ಸಾಧಕರು ಹಾಗೂ ಪ್ರಸಿದ್ಧ ಉಪನ್ಯಾಸಕರಾಗಿರುವ ಸ್ವಾಮೀಜಿಯವರು ದಾವಣಗೆರೆಯಲ್ಲಿ ತಮ್ಮ ಯತಿಜೀವನವನ್ನು ನಡೆಸುತ್ತಿರುವರು.**

## ಜೀವನದ ಆತ್ಯಂತಿಕ ಗುರಿ

ಆತ್ಯಂತಿಕ ದುಃಖನಿವೃತ್ತಿ ಹಾಗೂ ಪರಮಾನಂದ ಪ್ರಾಪ್ತಿರೂಪವಾದ ಮೋಕ್ಷವೇ ಸರ್ವಜೀವಿಗಳ ಪರಮಗಮ್ಯ. ಅದು ನಮ್ಮ ಸ್ವರೂಪವೇ ಆಗಿದೆ. ಅದನ್ನು ತಿಳಿಯಲಿಕ್ಕಾಗಿಯೇ ಈ ಮಾನವ ಜನ್ಮವು ಬಂದಿದೆ. ಆ ಧ್ಯೇಯ ಸಾಧನೆಯಲ್ಲಿ ಜಿಜ್ಞಾಸುಗಳಿಗೆ ದಾರಿತೋರಲು, ಮುನ್ನಡೆಸಲು ಅನೇಕ ಮಹಾತ್ಮರು ಅವತರಿಸಿದ್ದಾರೆ. ಅನೇಕ ಮತಗಳು, ಸಂಪ್ರದಾಯಗಳು, ಸಾಧನೆಗಳು, ಬೋಧನೆಗಳು ರೂಪುಗೊಂಡಿವೆ. ಆದುದರಿಂದ ನಾವು ನಮ್ಮ ಪರಮಧ್ಯೇಯವನ್ನು ಮರೆಯದೇ ಮಹಾತ್ಮರ ಬೋಧನೆಗಳನ್ನು ಅನುಸರಿಸಿ ಆ ಧ್ಯೇಯ ಸಾಧನೆಗಾಗಿ ಈಗಲೇ ಕೃತನಿಶ್ಚಯರಾಗಬೇಕು. ಅದನ್ನು ಈ ಜನ್ಮದಲ್ಲಿಯೇ, ಈಗಲೇ ಇಲ್ಲಿಯೇ ಸಾಧಿಸಿಕೊಳ್ಳಲು ಪ್ರಯತ್ನ ಮಾಡಬೇಕು.

ಇಹ ಚೇದವೇದೀದಥ
ಸತ್ಯಮಸ್ತಿ,
ನ ಚೇದಿಹಾವೇದೀತ್ ಮಹತೀ
ವಿನಷ್ಟಿಃ

ಅದನ್ನು ಇಲ್ಲಿಯೇ, ಈಗಲೇ ತಿಳಿದುಕೊಂಡರೆ ಒಳ್ಳೆಯದು, ಇಲ್ಲದಿದ್ದರೆ ಮಹಾನಷ್ಟ. ಜ್ಞಾನಾರ್ಜನೆಗೆ ಯೋಗ್ಯವಾದ ಇಂತಹ ಮಾನವ ಶರೀರವು ಮತ್ತೆ ಬರುತ್ತದೋ ಇಲ್ಲವೋ ಯಾರು ಬಲ್ಲರು? ಅನೇಕ ಜನ್ಮಗಳ ಮಹತ್ತರ ಪುಣ್ಯಫಲವನ್ನು ಕೊಟ್ಟು ಇದನ್ನು ಕೊಂಡಿದ್ದೇವೆ. ಅವಿವೇಕಿಗಳಾಗಿ ಅದನ್ನು ಪಶುಪಕ್ಷಿಗಳಂತೆ ಆಹಾರ ನಿದ್ರಾ ಭಯ ಮೈಥುನಗಳಲ್ಲೇ ವಿನಿಯೋಗಿಸಿದರೆ 'ಮಹತೀ ವಿನಷ್ಟಿಃ'.

## ಗುರಿಯೇ ಇಲ್ಲದ ಜೀವನ

ಲೋಕದಲ್ಲಿ ಬಹಳ ಜನರಿಗೆ ತಮ್ಮ ಜೀವನದ ಗಮ್ಯವೇ ಗೊತ್ತಿಲ್ಲ, ಮಾನವ ಜನ್ಮದ ಉದ್ದೇಶವೇ ತಿಳಿದಿಲ್ಲ. ಧನ ಸಂಪಾದನೆಯೇ ಕೆಲವರ ಧ್ಯೇಯ. ಮನೆಗಳು, ಮಠಗಳು, ಗುಡಿಗಳು, ಗೋಪುರಗಳನ್ನು ನಿರ್ಮಿಸುವುದೇ ಕೆಲವರ ಧ್ಯೇಯ. ರಾಜಕೀಯ, ಅಧಿಕಾರ ಸಂಪಾದನೆಯೇ ಕೆಲವರ ಧ್ಯೇಯ. ವನಿತಾ, ವಾಹನ, ಪುತ್ರ, ಮಿತ್ರಾದಿಗಳೊಂದಿಗೆ ಕಳೆಯುವ ವಿಲಾಸ ಜೀವನವೇ ಕೆಲವರ ಧ್ಯೇಯ. ಶಾಸ್ತ್ರಪಾಂಡಿತ್ಯ, ಡಿಗ್ರಿಗಳ ಸಂಪಾದನೆ, ಕೀರ್ತಿಪ್ರತಿಷ್ಠೆಗಳು ಇನ್ನು ಕೆಲವರ ಧ್ಯೇಯ. ಕೆಲವರಿಗಂತೂ 'ಲಂಬೋದರಾಯ ನಮಃ ಉದರಂ ಪೂಜಯಾಮಿ' ಎಂಬಂತೆ ರುಚಿರುಚಿಯಾದ ತಿಂಡಿಗಳಿಂದ ಹೊಟ್ಟೆ ತುಂಬಿಸಿಕೊಳ್ಳುತ್ತಿರುವುದೇ ಜೀವನದ ಪರಮಾರ್ಥವಾಗಿದೆ. ಈ ರೀತಿ ಜನರು ನಾನಾವಿಧ ಭಿನ್ನ ಭಿನ್ನ ಭಾವನೆಗಳಿಂದಲೂ ಧ್ಯೇಯೋದ್ದೇಶಗಳಿಂದಲೂ ಕೂಡಿ ಆಯಾ ವಿಷಯಗಳ ಸಂಪಾದನೆ ಸಂಗ್ರಹಣೆಯಲ್ಲಿಯೇ ನಿರತರಾಗಿ ಜೀವನವನ್ನು ಕಳೆದುಬಿಡುತ್ತಿದ್ದಾರೆ. ಮತ್ತೆ ಕೆಲವರು ತಮ್ಮ ತಮ್ಮ ಜಾತಿ-ಮತ, ಕುಲ, ಪಂಥ, ಸಿದ್ಧಾಂತಗಳೇ ಹೆಚ್ಚಿನವೆಂಬ ದುರಾಗ್ರಹದಿಂದ ಕೂಡಿ ಅನ್ಯರನ್ನು ವಿಮರ್ಶಿಸುತ್ತಾ, ನಿಂದಿಸುತ್ತಾ, ಯುದ್ಧಕ್ಕೆ ಸನ್ನದ್ಧರಾಗುತ್ತಿದ್ದಾರೆ. ಅಂಧಕಾರದಲ್ಲಿ ಬಿದ್ದು ನಿಜವಾದ ಗುರಿಯನ್ನು ಮರೆತು ಆತ್ಮವಿನಾಶವನ್ನೇ ಕೊಂಡು ತಂದುಕೊಳ್ಳುತ್ತಿದ್ದಾರೆ. ಈ ಅಜ್ಞಾನ ನಿದ್ರೆಯಲ್ಲಿ ಕನವರಿಸುತ್ತಿರುವವರನ್ನು, ಪಕ್ಕದಾರಿಗಳು, ತಪ್ಪುದಾರಿಗಳು ಹಿಡಿದು ನಡೆಯುತ್ತಿರುವವರನ್ನು ಶ್ರುತಿಮಾತೆಯು 'ಉತ್ತಿಷ್ಠತ! ಜಾಗ್ರತ! ಪ್ರಾಪ್ಯ ವರಾನ್ ನಿಬೋಧತ!' 'ಏಳು, ಎದ್ದೇಳು, ಬಲ್ಲ ಮಹಾತ್ಮರನ್ನು ಬಳಿ ಸಾರಿ ತಿಳಿದುಕೋ' (ಕಠ.೧-೩-೧೪) ಎಂದು ಎಚ್ಚರಿಸುತ್ತಿದ್ದಾಳೆ. ಈ ವಾಕ್ಯವು ವಿವೇಕಾನಂದರಿಗೆ ಬಹಳ ಪ್ರಿಯವಾದದ್ದು. ಇದರಿಂದಲೇ ಅವರು ಸಿಂಹಗರ್ಜನೆಯನ್ನು ಮಾಡಿ ಎಷ್ಟೋ ಜನರ ಮತ್ತನ್ನು ಬಿಡಿಸಿದ್ದಾರೆ : '*Arise, awake, stop not till the goal is reached*' 'ಏಳು, ಎದ್ದೇಳು, ಗುರಿಯನ್ನು ಸೇರುವವರೆಗೂ ನಿಲ್ಲದಿರು.'

## ನಿರಂತರ ಗುರಿಯೆಡೆಗೆ ಸಾಗಬೇಕು

ನದಿಯು ತನ್ನ ಗಮ್ಯವನ್ನು ಸೇರುವವರೆಗೂ ನಿಲ್ಲುವುದಿಲ್ಲ, ಪ್ರವಹಿಸುತ್ತಲೇ ಇರುತ್ತದೆ. ಮಾರ್ಗದಲ್ಲಿ ಅನೇಕರು ಪೂಜಿಸುತ್ತಾರೆ, ಹಾಡಿ ಹೊಗಳುತ್ತಾರೆ. ಕೆಲವರು ಮಲಿನಗೊಳಿಸುತ್ತಾರೆ. ಈ ಆಕರ್ಷಣೆ ವಿಕರ್ಷಣೆಗಳಿಗೆ ಒಳಗಾಗದೇ ಯಾರೊಂದಿಗೂ ರಾಗವನ್ನಾಗಲೀ, ದ್ವೇಷವನ್ನಾಗಲೀ ಬೆಳೆಸಿಕೊಳ್ಳದೆ, ತನ್ನ ದಾರಿಯಲ್ಲಿ ತಾನು ನಡೆದು ಹೋಗುತ್ತಲೇ ಇರುತ್ತದೆ. ಆದುದರಿಂದಲೇ ದತ್ತಾತ್ರೇಯರು ಅದನ್ನು ತಮ್ಮ ಗುರುವನ್ನಾಗಿ ಮಾಡಿಕೊಂಡಿದ್ದಾರೆ. ನದಿಯು ಸುಂದರವಾದ ಪರ್ವತಗಳಲ್ಲಿಯೂ, ಕಣಿವೆಗಳಲ್ಲಿಯೂ, ಸಮತಟ್ಟು ಪ್ರದೇಶಗಳಲ್ಲಿಯೂ ವಿಶಾಲಮೈದಾನಗಳಲ್ಲಿಯೂ ಬೆಟ್ಟಗಳ ಇಕ್ಕಟ್ಟಾದ ಸಂದಿಗಳಲ್ಲಿಯೂ ಪ್ರವಹಿಸುತ್ತಿರುತ್ತದೆ. ಆದರೆ ಯಾವುದಕ್ಕೂ ಅಂಟಿಕೊಳ್ಳುವುದಿಲ್ಲ. ಎಲ್ಲಿಯೂ ನಿಲ್ಲುವುದಿಲ್ಲ. ಗುರಿಯನ್ನು ಸೇರುವವರೆಗೂ ಅದಕ್ಕೆ ಬಿಡುವಿಲ್ಲ, ವಿಶ್ರಾಂತಿಯೂ ಇಲ್ಲ. ಆದರೆ ಮಾನವನು ಮಾತ್ರ ತನ್ನ ಗುರಿಯನ್ನು ಮರೆತು ಮಾರ್ಗದಲ್ಲಿಯೇ ನಿಂತುಬಿಡುತ್ತಿದ್ದಾನೆ. ಅದೇತಕ್ಕೋ ಈ ಕ್ಲೀಬತ್ವ? ಅದೇಕೋ ಈ ಬಲಹೀನತೆ? ಯಾವುದೋ ಒಂದು ಮೋಹದ ಮೊಸಳೆ ಅವನನ್ನು ಹಿಡಿದುಕೊಳ್ಳುತ್ತಿದೆ.

## ಸಾಧನವೇ ಬಂಧನವಾಗಬಾರದು

ಸಾಧನೆಗಳು ಸಾಧನೆಗಳು ಮಾತ್ರವೇ ಎಂಬುದನ್ನು ಗುರುತಿಸಿ ಅವುಗಳನ್ನು ಅನುಸರಿಸಿ ಕ್ರಮೇಣ ಅಧಿಗಮಿಸಿ ಮುಂದಕ್ಕೆ ಹೋಗಬೇಕೆಂಬ ವಿಷಯವನ್ನೇ ಮರೆತು ಸಾಧನೆಯನ್ನೇ ಧ್ಯೇಯವೆಂದು

ಕೊಳ್ಳುತ್ತಿದ್ದಾನೆ. ಊರಿಗೆ ಹೋಗಲು ಬಸ್ಸು ಒಂದು ಸಾಧನವು; ಬಸ್ಸು ಹೊಸದಾಗಿದೆ, ಸೀಟುಗಳು ಮೆತ್ತಗಿವೆ, ಸದಾ ಇದರಲ್ಲಿಯೆ ಇದ್ದು ಬಿಡುತ್ತೇನೆ ಎಂದುಕೊಂಡರೆ ಅದು ಮೂರ್ಖತ್ವದ ಪರಮಾವಧಿ. ಊರು ಬರುವ ಮೊದಲೇ ಇಳಿದುಬಿಡುವುದು, ಊರು ಬಂದರೂ ಇಳಿಯದಿರುವುದು ಎರಡೂ ಅವಿವೇಕವೇ. ಒಮ್ಮೊಮ್ಮೆ ಗುರಿಯನ್ನು ಸೇರಲು ಅನೇಕ ರೀತಿಯ ವಾಹನಗಳನ್ನು ಬದಲಾಯಿಸಬೇಕಾಗಿಯೂ ಇರುತ್ತದೆ. ಬದಲಾಯಿಸಬೇಕಾದ ಸಮಯಕ್ಕೆ ಬದಲಾಯಿಸದಿದ್ದರೆ ತನಗೇ ನಷ್ಟವಲ್ಲವೇ!

ಒಬ್ಬ ರೈತನಿದ್ದಾನೆ. ಒಂದು ಮರವನ್ನು ಬೆಳೆಸಬೇಕೆಂದು ಬೀಜವನ್ನು ನೆಟ್ಟಿದ್ದಾನೆ. ಯಾರಾದರೂ ತಿಳಿಯದೆ ತುಳಿದುಬಿಟ್ಟರೆ ಹಾಳಾಗಬಹುದೆಂದು ರಕ್ಷಣೆಗೆ ಅದರ ಮೇಲೆ ಒಂದು ಮುಳ್ಳಿನ ಕಂಟಿಯನ್ನು ಮುಚ್ಚಿದ್ದಾನೆ. ಸ್ವಲ್ಪ ಕಾಲಕ್ಕೆ ಅಂಕುರವು ಹೊರಬಂತು. ಈಗ ಅದರ ಬೆಳವಣಿಗೆಗೆ ಮೇಲೆ ಮುಚ್ಚಿದ ಮುಳ್ಳೇ ಅಡ್ಡವಾಗಿದೆ. ರೈತನು ಈಗ ಅದನ್ನು ತೆಗೆದುಹಾಕಿದ. ಸುತ್ತೂ ಒಂದು ಸಣ್ಣ ಬೇಲಿಯನ್ನು ನಿರ್ಮಿಸಿದ. ಗಿಡ ಇನ್ನೂ ದೊಡ್ಡದಾಯಿತು. ತನ್ನ ಕೊಂಬೆಗಳನ್ನು ವಿಸ್ತರಿಸಲು ಆ ಬೇಲಿ ಅಡ್ಡವಾಯಿತು. ರೈತನು ಆ ಬೇಲಿಯನ್ನು ತಾನೇ ಕಿತ್ತುಹಾಕಿ ಇನ್ನೂ ಅಗಲವಾದ, ಎತ್ತರವಾದ ಮತ್ತೊಂದು ಬೇಲಿಯನ್ನು ನಿರ್ಮಿಸಿದ. ಗಿಡದ ಕಾಂಡವು ಸಣ್ಣದಾಗಿದ್ದುದರಿಂದ ಗಾಳಿಯ ಹೊಡೆತಕ್ಕೆ ಮುರಿದು ಬೀಳದಂತೆ ಅದರ ಪಕ್ಕದಲ್ಲಿ ಒಂದು ಕಟ್ಟಿಗೆಯನ್ನು ನೆಟ್ಟು ಆಧಾರವಾಗಿ ಗಿಡವನ್ನು ಅದಕ್ಕೆ ಕಟ್ಟಿನಿಲ್ಲಿಸಿದ. ಗಿಡವು ಇನ್ನೂ ಬೆಳೆದು ಮರವಾಯಿತು. ಅದರ ಬುಡವು ದಪ್ಪವಾಯಿತು. ಕೊಂಬೆಗಳು ಯಾರ ಕೈಗೂ ಎಟುಕದಷ್ಟು ಮೇಲಕ್ಕೆ ಬೆಳೆದವು. ಈಗ ಅದಕ್ಕೆ ಪಶುಗಳಿಂದಲೂ, ಯಾರಿಂದಲೂ ಭಯವಿಲ್ಲ; ಬೇಲಿಯೂ ಬೇಕಿಲ್ಲ, ಆಲಂಬನೆಯ ಅವಶ್ಯಕತೆ ಇಲ್ಲ. ನಿರಾವರಣವಾದ ಬಯಲಿನಲ್ಲಿ ಠೀವಿಯಿಂದ ನಿಂತಿದೆ. ನಿರ್ಭಯವಾಗಿ ಸ್ವತಂತ್ರವಾಗಿ ಉನ್ನತವಾಗಿ ಕಂಗೊಳಿಸುತ್ತಿದೆ.

ಇದೇ ರೀತಿ ಅಧ್ಯಾತ್ಮ ಸಾಧಕನು ನಿರಾವರಣವಾದ ನಿರ್ವಾಣ ರೂಪವಾದ ಬ್ರಹ್ಮಸ್ವರೂಪವನ್ನು ಹೊಂದುವವರೆಗೂ ಅವನ ಸುತ್ತೂ ಕೆಲವು ಬೇಲಿಗಳಂತೆಯೂ, ಆಲಂಬನೆಯಂತೆಯೂ ಆತ್ಮರಕ್ಷಣೆ ಮತ್ತು ಪೋಷಣೆಗಾಗಿ ಶಾಸ್ತ್ರಗಳು ವಿಧಿಸುವ ಬ್ರಹ್ಮಚರ್ಯಾದಿ ಆಶ್ರಮಗಳು, ದ್ವಿಜತ್ವಾದಿ ವರ್ಣಗಳು, ಜಾತಿ, ಮತ, ಕುಲ ಆಚಾರಗಳು, ಶೈವ-ವೈಷ್ಣವ-ಶಾಕ್ತ, ಸಾಕಾರ-ನಿರಾಕಾರ, ಸಗುಣ-ನಿರ್ಗುಣಾದಿ ಉಪಾಸನೆಗಳು, ದ್ವೈತ-ಅದ್ವೈತಾದಿ ಸಿದ್ಧಾಂತ ಸಂಪ್ರದಾಯಗಳು, ಗುರುಶಾಸ್ತ್ರ ಪರಂಪರೆಗಳೂ ಮುಂತಾದ ನಿಯಮ ನಿಬಂಧನೆಗಳನ್ನು, ಆಲಂಬನೆಗಳನ್ನು ಸ್ವೀಕರಿಸಬೇಕು. ಅವುಗಳನ್ನು ಶ್ರದ್ಧೆಯಿಂದ ಅನುಸರಿಸಬೇಕು, ಆಚರಿಸಬೇಕು. ಅವುಗಳಿಂದ ಸಂಪೂರ್ಣವಾಗಿ ಪೋಷಿಸಲ್ಪಟ್ಟು ಅವುಗಳಲ್ಲಿನ ದುರಾಗ್ರಹವನ್ನು ಬಿಟ್ಟು ಮುಂದೆ ಸಾಗಬೇಕು. ತನ್ನ ಸ್ವಸ್ವರೂಪದಲ್ಲಿ ನಿಲ್ಲಬೇಕು. 'ಆತ್ಮನ್ಯೇವಾತ್ಮನಾ ತುಷ್ಟಃ'ನಾಗಬೇಕು. ಬ್ರಾಹ್ಮೀ ಸ್ಥಿತಿಯನ್ನು ಪಡೆಯಬೇಕು. ಹಾಗಲ್ಲದೇ ಆ ಕರ್ಮೋಪಾಸನಾದಿ ಸಾಧನಗಳಲ್ಲಿಯೇ ದುರಭಿಮಾನವನ್ನು, ದುರಾಗ್ರಹವನ್ನು, ರಾಗದ್ವೇಷಗಳನ್ನು ಬೆಳೆಸಿಕೊಂಡರೆ ಅದೇ ಬಂಧನವಾಗುತ್ತದೆ. ವಾಸ್ತವವಾದ ಗುರಿಯು ಕೈಜಾರಿ ಹೋಗುತ್ತದೆ. ಪರಮಗಮ್ಯದ ಕಡೆ ಗಮನವನ್ನಿರಿಸಿಕೊಂಡು ಸಾಧನೆಗಳಿಂದ ಆಗಬಹುದಾದ ಪ್ರಯೋಜನವನ್ನು ಪಡೆಯುತ್ತಾ ಪುರೋಗಮಿಸುವುದೇ ವಿವೇಕವಂತರ ಲಕ್ಷಣ. ಅವಿವೇಕಿಗಳು ದುರಾಗ್ರಹದಿಂದ ಕೂಡಿ ಗಮ್ಯವನ್ನು ಮರೆತು ತಮ್ಮ ತಮ್ಮ ಜಾತಿ, ಮತ, ಕುಲ, ಪಕ್ಷ, ಸಿದ್ಧಾಂತ, ಪರಂಪರೆ, ಶಾಸ್ತ್ರ—ಇತ್ಯಾದಿ ಕೂಪಗಳಲ್ಲಿ ಸಿಕ್ಕಿಕೊಂಡು ಅದರಿಂದ ಹೊರಬರಲಾರದೆ, ಬರಲಿಕ್ಕೆ ಇಷ್ಟಪಡದೆ ಮೋಹಪರವಶರಾಗಿ ತಾವು ಮಾಡುತ್ತಿರುವುದೇ ಸರಿಯೆಂದು ಸಮರ್ಥಿಸಿಕೊಳ್ಳುತ್ತಾ ಜನನ ಮರಣಾದಿಗಳ ಕಬಂಧ ಹಸ್ತಗಳಲ್ಲಿ ಬಂಧಿತರಾಗುತ್ತಾರೆ.

**ಪೌರಸ್ತ್ಯಕ್ಕೂ ಪಾಶ್ಚಿಮಾತ್ಯಕ್ಕೂ, ಸನಾತನಕ್ಕೂ ಆಧುನಿಕತೆಗೂ, ವೇದಾಂತಕ್ಕೂ ವಿಜ್ಞಾನಕ್ಕೂ, ವ್ಯವಹಾರಕ್ಕೂ ಪರಮಾರ್ಥಕ್ಕೂ ಮಧ್ಯೆ ಸೇತುವೆಯನ್ನು ನಿರ್ಮಿಸಿದ ಸ್ವಾಮಿ ವಿವೇಕಾನಂದರ ಅಭಿಪ್ರಾಯದಲ್ಲಿ ಬ್ರಹ್ಮಜ್ಞಾನವು ಒಂದೇ, ಈ ಗೋಡೆಗಳೆಲ್ಲವನ್ನೂ ಬೀಳಿಸಬಲ್ಲ ಏಕೈಕ ಬ್ರಹ್ಮಾಸ್ತ್ರವು. ಉಪನಿಷತ್ತುಗಳು ಇದನ್ನೇ ಘೋಷಿಸುತ್ತವೆ.**

## ಮತೀಯ ಮಿತಿ ಮೀರಬೇಕು.

ಕೆಲವರು ಸದಾ ಯೋಗಾಸನ ಪ್ರಾಣಾಯಾಮಾದಿಗಳನ್ನು ಮಾಡುವುದೇ ಪರಮಾರ್ಥವೆಂದು, ಇನ್ನು ಕೆಲವರು ವೇದವನ್ನು, ಗೀತೆಗಳನ್ನು, ಸ್ತೋತ್ರಪಾಠಗಳನ್ನು ಟೇಪ್‌ರಿಕಾರ್ಡ್‌ನಂತೆ ಆವೃತ್ತಿ ಮಾಡುವುದೇ ಧರ್ಮವೆಂದು, ಮತ್ತೆ ಕೆಲವರು ಅಭಿಷೇಕ, ಹೋಮ ಹವನಾದಿಗಳನ್ನು ಮಾಡುತ್ತಿರುವುದೇ ಮುಕ್ತಿಯೆಂದು ಭಾವಿಸುತ್ತಿದ್ದಾರೆ. ಇನ್ನೂ ಕೆಲವರು ಆಚಾರಹೀನರಾಗಿ ಶುಷ್ಕವಿಚಾರದಲ್ಲಿಯೇ ಕಾಲವನ್ನು ಕಳೆಯುತ್ತಿದ್ದಾರೆ. ಒಬ್ಬೊಬ್ಬರು ಒಂದೊಂದರಲ್ಲಿ ದುರಾಗ್ರಹ ಪೀಡಿತರಾಗಿದ್ದಾರೆ. ಸಾಲದ್ದಕ್ಕೆ ಇತರರ ಸಾಧನೆಗಳು, ಸಿದ್ಧಾಂತಗಳು ಉಪಯೋಗವಿಲ್ಲದವುಗಳೆಂದು ನಿಂದಿಸುತ್ತಾ, ದೇವರು ತಮ್ಮ ಗುಡಿಯಲ್ಲಿ ಮಾತ್ರವೇ ಇದ್ದಾನೆಂದು, ತಾವು ಮಾತ್ರವೇ ನೋಡಬಲ್ಲೆವೆಂದು ಪ್ರಗಲ್ಭಗಳನ್ನಾಡುತ್ತಾ ಗರ್ವಪಡುತ್ತಾರೆ. ಎಲ್ಲರೂ ತಮ್ಮನ್ನೇ ಅನುಸರಿಸಬೇಕೆಂದು ಒತ್ತಾಯ ಮಾಡುತ್ತಾರೆ, ಪ್ರಲೋಭ ತೋರಿಸುತ್ತಾರೆ. ಅದು ಫಲಿಸದಿದ್ದರೆ ಹಿಂಸೆಯನ್ನೂ ಮಾಡಲು ಸಿದ್ಧರಾಗುತ್ತಾರೆ. ವಿಶಾಲ ದೃಷ್ಟಿ ಇಲ್ಲ. ಎಲ್ಲಿ ನೋಡಿದರೂ ಸಂಕುಚಿತತೆ, ಸ್ವಾರ್ಥತೆಯೇ

ತಾಂಡವವಾಡುತ್ತಿದೆ. ಈ ರೀತಿ ಅನೇಕ ಭೇದಗಳನ್ನೇ ಕಲ್ಪಿಸಿಕೊಳ್ಳುತ್ತಿದ್ದಾರೆ. *Men build more walls than bridges*—ಮನುಷ್ಯರು ಸೇತುವೆಗಳಿಗಿಂತಲೂ ಗೋಡೆಗಳನ್ನೇ ಅಧಿಕವಾಗಿ ಕಟ್ಟುತ್ತಾರೆಂದು ಒಬ್ಬ ಮಹಾನುಭಾವನು ಹೇಳಿದ್ದಾನೆ.

**ಧ್ಯೇಯಸಾಧನೆಗೆ ಶ್ರದ್ಧೆಯೇ ಬೀಜ, ತಪಸ್ಸೇ ಮಳೆ, ಪ್ರಾಮಾಣಿಕ ಪರಿಶ್ರಮವೇ ಎತ್ತುಗಳು, ತಿಳಿವಳಿಕೆಯೇ ನೇಗಿಲು, ದೃಢ ಮನಸ್ಸೇ ಹಗ್ಗ ಮತ್ತು ಈ ಕೃಷಿಯ ಫಲವೇ ಧ್ಯೇಯ ಸಾಕ್ಷಾತ್ಕಾರ.**

**—ಭಗವಾನ್ ಬುದ್ಧ**

ಪೌರಸ್ತ್ಯಕ್ಕೂ-ಪಾಶ್ಚಿಮಾತ್ಯಕ್ಕೂ , ಸನಾತನಕ್ಕೂ-ಆಧುನಿಕತೆಗೂ ವೇದಾಂತಕ್ಕೂ-ವಿಜ್ಞಾನಕ್ಕೂ, ವ್ಯವಹಾರಕ್ಕೂ-ಪರಮಾರ್ಥಕ್ಕೂ ಮಧ್ಯೆ ಸೇತುವೆಯನ್ನು ನಿರ್ಮಿಸಿದ ಸ್ವಾಮಿ ವಿವೇಕಾನಂದರ ಅಭಿಪ್ರಾಯದಲ್ಲಿ ಬ್ರಹ್ಮಜ್ಞಾನವು ಒಂದೇ ಈ ಗೋಡೆಗಳೆಲ್ಲವನ್ನೂ ಬೀಳಿಸಬಲ್ಲ ಏಕೈಕ ಬ್ರಹ್ಮಾಸ್ತ್ರವು. ಉಪನಿಷತ್ತುಗಳು ಇದನ್ನೇ ಘೋಷಿಸುತ್ತವೆ. ಸ್ವಾಮಿ ವಿವೇಕಾನಂದರು ಮೂರ್ತಿವೆತ್ತ ಉಪನಿಷತ್ತುಗಳ ಸ್ವರೂಪವೇ ಆಗಿದ್ದರು. ಉಪನಿಷತ್ ಪ್ರತಿಪಾದ್ಯವಾದ ಈ ಬ್ರಹ್ಮಾನುಭೂತಿಯೆ ನಮ್ಮ ಚರಮ ಧ್ಯೇಯವು. ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಇತರ ಧರ್ಮಗಳೂ ಕರ್ಮಗಳೂ ಎಲ್ಲವೂ ಅದಕ್ಕೆ ಸಾಧನಗಳು ಮಾತ್ರವೇ.

## ಗುಡಿಯ ಗಡಿಯಾಚೆ

ಸ್ವಾಮಿ ವಿವೇಕಾನಂದರು ಒಂದು ಕಡೆ, *It is good to be born in a church but not to die there*—ಚರ್ಚಿನಲ್ಲಿ(ದೇವಾಲಯದಲ್ಲಿ) ಹುಟ್ಟುವುದು ಒಳ್ಳೆಯದೇ, ಆದರೆ ಅಲ್ಲಿಯೆ ಸಾಯುವುದು ಬಹಳ ಕೆಟ್ಟದ್ದು ಎಂದಿದ್ದಾರೆ. ಅಂದರೆ ದೇವಾಲಯದಲ್ಲಿ ಭಗವಂತನಿದ್ದಾನೆ ಎಂಬ ಭಾವನೆಯಿಂದ ಸಾಧನೆಯನ್ನು ಪ್ರಾರಂಭಿಸುವುದು ಒಳ್ಳೆಯದೇ, ಆದರೆ ದೇವಾಲಯದಲ್ಲಿ ಮಾತ್ರವೇ ದೇವರಿದ್ದಾನೆ ಎಂಬ ಭಾವದಿಂದಲೇ ಸಾಯುವುದು ಒಳ್ಳೆಯದಲ್ಲ. ಹುಟ್ಟಿದವನು ಹುಟ್ಟಿದಂತೆಯೇ ಇರಬಾರದು, ಬೆಳೆಯಬೇಕು, ವಿಕಾಸವನ್ನು ಹೊಂದಬೇಕು, ವಿಶಾಲವಾಗಬೇಕು. ಈ ದೇವಾಲಯದಲ್ಲಿ ಕಂಡ ದೇವರನ್ನೇ ಸರ್ವತ್ರ ನೋಡುವ ಶಕ್ತಿಯನ್ನು ಪಡೆಯಬೇಕು. 'ಸರ್ವಂ ಖಲ್ವಿದಂ ಬ್ರಹ್ಮ' 'ಅಯಮಾತ್ಮಾ ಬ್ರಹ್ಮ' ಎಂಬ ದೃಷ್ಟಿಯನ್ನು ಪಡೆದು ಸಾಯುವ ಒಳಗಾಗಿಯೇ ಸರ್ವಾತ್ಮ ಭಾವದಲ್ಲಿ ನೆಲೆಸಬೇಕು. ಕೂಪಸ್ಥ ಮಂಡೂಕವಾಗಬಾರದು. ಬ್ರಾಹ್ಮಣನು ಬ್ರಾಹ್ಮಣನಾಗಿಯೇ, ಶೂದ್ರನು ಶೂದ್ರನಾಗಿಯೇ, ವೈಷ್ಣವನು ವೈಷ್ಣವನಾಗಿಯೇ, ಹಿಂದುವು ಹಿಂದುವಾಗಿಯೇ, ಮುಸಲ್ಮಾನನು ಮುಸಲ್ಮಾನನಾಗಿಯೇ, ಕ್ರೈಸ್ತನು ಕ್ರೈಸ್ತನಾಗಿಯೇ ಸಾಯಬಾರದು. ಅಂತ್ಯಕಾಲದಲ್ಲಾದರೂ ಎಲ್ಲ ಅಭಿಮಾನಗಳನ್ನು ತೊರೆದು ಬ್ರಹ್ಮನಿರ್ವಾಣವನ್ನು ಹೊಂದಬೇಕು. ತಾನು ಸ್ವೀಕರಿಸಿದ ಸಾಧನೆ, ಆಲಂಬನೆ ತನ್ನ ಕಾಲನ್ನೇ ಕಚ್ಚುವ ಚಪ್ಪಲಿಯಂತೆ ಆಗಬಾರದು, ತನ್ನ ನಡಿಗೆಗೆ ಅವರೋಧವನ್ನುಂಟುಮಾಡಬಾರದು.

ಹಾಗೆಂದು ವರ್ಣಾಶ್ರಮಾಚಾರ ಧರ್ಮಗಳು ವ್ಯರ್ಥವೆಂದು ತಿಳಿಯಬಾರದು. ಊಟವು ಮುಗಿಯುವವರೆಗೂ ಎಲೆಯು ಆವಶ್ಯಕವೇ. ಸಾಧನೆಗಳು ಇಲ್ಲದಿದ್ದರೆ, ಅಂಧಕಾರದಲ್ಲಿ ಬೀಳುತ್ತೇವೆ. ಸಾಧನೆಗಳಲ್ಲಿಯೇ ದುರಾಗ್ರಹವನ್ನು ದುರಭಿಮಾನವನ್ನು ಹೊಂದಿದರೆ ಇನ್ನೂ ಹೆಚ್ಚಿನ ಅಂಧಕಾರದಲ್ಲಿ ಬೀಳುತ್ತೇವೆ.

**ಅಂಧಂ ತಮಃ ಪ್ರವಿಶಂತಿ**
**ಯೇ ಅವಿದ್ಯಾಮುಪಾಸತೇ ।**
**ತತೋ ಭೂಯ ಇವ ತೇ ತಮೋ**
**ಯ ಉ ವಿದ್ಯಾಯಾಂ ರತಾಃ॥**

'ಯಾರು ಅವಿದ್ಯೆಯಲ್ಲಿ ನಿರತರಾಗಿರುತ್ತಾರೊ (ಸಾಧನೆಯನ್ನೇ ತಿಳಿಯದವರು, ಮಾಡದವರು) ಅವರು ಅಂಧಕಾರವನ್ನು ಪ್ರವೇಶಿಸುತ್ತಾರೆ. ಆದರೆ ವಿದ್ಯೆಯಲ್ಲಿ ನಿರತರಾದವರು (ದುರಭಿಮಾನದಿಂದ ಸಾಧನೆಗೇ ಅಂಟಿಕೊಳ್ಳುವವರು) ಅದಕ್ಕಿಂತಲೂ ತೀವ್ರವಾದ ಅಂಧಕಾರವನ್ನು ಪ್ರವೇಶಿಸುತ್ತಾರೆ.' (**ಈಶಾವಾಸ್ಯೋಪನಿಷತ್**,೯) —ಎಂಬ ಎಚ್ಚರಿಕೆಯನ್ನು ಗಮನಿಸಿ, ಸಮಯಾಸಮಯಗಳನ್ನು, ಯುಕ್ತಾಯುಕ್ತಗಳನ್ನು ಅರಿತು, ವಿವೇಕದೊಂದಿಗೆ ಸಾಧನ ತತ್ಪರರಾಗಬೇಕು. 'ಅಜ್ಞಾನಿಗಳಿಗೆ ಬೆಳಕು ತನ್ನಿ, ವಿದ್ಯಾವಂತರಿಗೆ ಇನ್ನೂ ಹೆಚ್ಚು ಬೆಳಕು ತನ್ನಿ. ಬಡವರಿಗೆ ಬೆಳಕು ತನ್ನಿ, ಶ್ರೀಮಂತರಿಗೆ ಇನ್ನೂ ಹೆಚ್ಚು ಬೆಳಕು ತನ್ನಿ' ಎಂಬುದಾಗಿ ಸ್ವಾಮಿ ವಿವೇಕಾನಂದರು ಹೇಳುತ್ತಿದ್ದುದು ಇದಕ್ಕಾಗಿಯೇ.

## ಕೋಶದಿಂದ ಅನಂತಾಕಾಶವೆಡೆಗೆ

ಕೆಲವು ಕೀಟಗಳು ಶೈಶವಾವಸ್ಥೆಯಲ್ಲಿ ತಮ್ಮ ಸುತ್ತೂ ತಾವೇ ಗೂಡು ಕಟ್ಟಿಕೊಳ್ಳುತ್ತವೆ. ಅದರಲ್ಲಿ ತಕ್ಕಮಟ್ಟಿಗೆ ಬೆಳೆದು ಅದನ್ನು ಭೇದಿಸಿಕೊಂಡು ವಿಶಾಲ ವಿಶ್ವದೊಳಕ್ಕೆ ಬಂದು ಸ್ವತಂತ್ರವಾಗಿ ವಿಹರಿಸುತ್ತವೆ. ಜಾತಿ, ಮತ, ವರ್ಣ, ಆಶ್ರಮ, ಪಂಥ, ಸಿದ್ಧಾಂತ, ಪರಂಪರೆ ಇತ್ಯಾದಿಗಳೆಲ್ಲವೂ ಇಂತಹ ಅಧ್ಯಾರೋಪಿತ ಕೋಶಗಳೇ. ಅವುಗಳಲ್ಲಿನ ದುರಭಿಮಾನವನ್ನು ತೊರೆದು, ವ್ಯಾಮೋಹವನ್ನು ಮುರಿದು ಅಭೇದವೂ ಅದ್ವಿತೀಯವೂ ಆದ ನಿರಾವರಣ ಬ್ರಹ್ಮಾಕಾಶದಲ್ಲಿ, ಚಿದಾಕಾಶದಲ್ಲಿ ಸ್ವತಂತ್ರರಾಗಿ ಸಚ್ಚಿದಾನಂದ ಸ್ವರೂಪಿಗಳಾಗಿ ವಿಹರಿಸಬೇಕು. ಅದುವೇ ಅಕ್ಷರವೂ, ಶಾಶ್ವತವೂ, ಮೋಕ್ಷಪದವು. ಈ ಜನ್ಮದಲ್ಲಿಯೇ ಅದನ್ನು ತಿಳಿಯದವನು ಕೃಪಣನು, ದೀನನು, ನಿರ್ಭಾಗ್ಯನು ಎಂದು ಶ್ರುತಿಯು ನಿಂದಿಸಿದೆ:'**ಯೋ ವಾ ಏತದಕ್ಷರಂ ಗಾರ್ಗಿ ಅವಿದಿತ್ವಾ ಅಸ್ಮಾಲ್ಲೋಕಾತ್ ಪ್ರೈತಿ ಸ ಕೃಪಣಃ**'(ಬೃಹದಾರಣ್ಯಕ, ೩.೮.೧೦). ಆ ಪರಮ ಗಮ್ಯವನ್ನು, ಬ್ರಹ್ಮಾತ್ಮೈಕ್ಯಾನುಭೂತಿಯನ್ನು ಪಡೆಯುವವರೆಗೂ ನಿಲ್ಲದೆ ವಿವೇಕಯುಕ್ತರಾಗಿ ಸಾಧನೆಯನ್ನು ಮಾಡುತ್ತಲೇ ಇರಬೇಕು.